

# ಧೃತಿಗೆಡದ ಧೃತಿ



**ಕೊರೊನಾ ಎಲ್ಲರ ಪಾಲಿಗೆ ವೇದನೆಯ ಸಮರವಾಗಿ ಪರಿಣಮಿಸಿದ್ದರೆ, ಕೆಲಸ ಕಳೆದುಕೊಂಡ, ಚಾಕಚಕ್ಯತೆ ಇರುವ ಮಹಿಳೆಯರ ಪಾಲಿಗೆ ಇದು ವರವಾಗಿ ಪರಿಣಮಿಸಿದೆ. ಮಹಿಳೆಯರು ಮನೆಯಲ್ಲೇ ತಯಾರಿಸಿದ ಉತ್ಪನ್ನಗಳಿಗೆ ಆನ್‌ಲೈನ್‌ನಲ್ಲಿ ವಹಿವಾಟು ನಡೆಸಲು ಸೂಕ್ತ ವೇದಿಕೆ ಒದಗಿಸಿ ಎಂತಹ ಕಷ್ಟ ಕಾಲ ಬಂದರೂ 'ಧೃತಿಗೆಡದಿರಿ' ಎಂಬ ಸಂದೇಶದೊಂದಿಗೆ 'ಧೃತಿ' ಮಹಿಳಾ ಮಾರುಕಟ್ಟೆ ಸಾಧನೆಯ ಹಾದಿಯಲ್ಲಿ ಮುನ್ನಡೆದಿದೆ.**

**■ ಉಮಾ ಅನಂತ್**



ಅಪರ್ಣಾ ರಾವ್, ಗ್ರೂಪ್ ಅಡ್ಮಿನ್

ಕೊರೊನಾ ಸೋಂಕು, ಆರ್ಥಿಕ ಕುಸಿತ, ಲಾಕ್‌ಡೌನ್, ಕೆಲಸ ಕಳೆದುಕೊಳ್ಳುವುದು.... ಒಂದಕ್ಕಿಂತ ಒಂದು ಭೀಕರ, ಹೃದಯ ಹಿಂಡುವ ಚಿತ್ರಣಗಳೇ. ಮನೆಯ ಆರ್ಥಿಕ ಪರಿಸ್ಥಿತಿ ಸುಧಾರಿಸಿ ಸಂಸಾರ ರಥವನ್ನು ಮುನ್ನಡೆಸುವ ಮಹಿಳೆಯರಿಗಂತೂ ಈ ಚಿತ್ರಣಗಳು ಮಾನಸಿಕ ವೇದನೆಗೆ ನಾಂದಿ ಹಾಡುವಂಥದ್ದು. ಒಂದೆಡೆ ಕೆಲಸವಿಲ್ಲ, ಇನ್ನೊಂದೆಡೆ ಮನೆಯಲ್ಲಿ ಖಾಲಿ ಕೂರುವ ಪರಿಸ್ಥಿತಿ. ಇಂತಹ ದುರಿತ ಕಾಲದಲ್ಲಿ ಮಹಿಳೆಯರ ಆರ್ಥಿಕತೆಗೆ ಟಾನಿಕ್‌ನಂತೆ ಸಹಾಯಕ್ಕೆ ಬಂದಿರುವುದು 'ಧೃತಿ' ಎಂಬ ಫೇಸ್‌ಬುಕ್ ಮಹಿಳಾ ಮಾರುಕಟ್ಟೆ ಆನ್‌ಲೈನ್ ಬಜಾರ್!

ಮಹಿಳೆಯರು ಮನೆಯಲ್ಲಿ ಕುಳಿತು ತಯಾರಿಸಿದ ಚಿಪ್ಸ್, ಸಿಹಿತಿಂಡಿಗಳು, ಉಪ್ಪಿನಕಾಯಿ, ಹಪ್ಪಳ ಸಂಡಿಗೆ, ಕರಕುಶಲ ವಸ್ತುಗಳು, ಕೃತಕ ಒಡವೆಗಳು, ಸಲ್ವಾರ್, ಕುರ್ತಿಗಳು, ಒಳಾಂಗಣ ಅಲಂಕಾರಿಕ ವಸ್ತುಗಳನ್ನು ಆನ್‌ಲೈನ್‌ನಲ್ಲೇ ಮಾರಾಟ ಮಾಡಿ ಆರ್ಥಿಕ ಸ್ವಾವಲಂಬನೆಗೆ ಸೂಕ್ತ ವೇದಿಕೆ ಒದಗಿಸಿಕೊಟ್ಟ ಈ ಬಜಾರ್‌ಗೆ ಇದೀಗ ಮೊದಲ ಹುಟ್ಟುಹಬ್ಬ!

ಮಹಿಳೆಯರ ಕನಸನ್ನು ಸಾಕಾರಗೊಳಿಸಿ, ತಾವು ತಯಾರಿಸಿದ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ಒದಗಿಸಿಕೊಡುವ ಮೂಲಕ ವ್ಯಾಪಾರ ವಹಿವಾಟುಗಳನ್ನು ಸುವ್ಯವಸ್ಥಿತವಾಗಿ ಮಾಡಿಕೊಡುವಂತೆ ಹೋಗಲು ಅನುವು ನೀಡಿದವರು ಬೆಂಗಳೂರಿನ ಅಪರ್ಣಾ ರಾವ್. ಕಳೆದ ವರ್ಷ ಮೇ 25ರಂದು ಫೇಸ್‌ಬುಕ್‌ನಲ್ಲಿ ತೆರೆದ 'ಧೃತಿ' ಆನ್‌ಲೈನ್ ಮಾರುಕಟ್ಟೆ, ಖಾತೆ ತೆರೆದ ಆರಂಭದಲ್ಲಿ ಕೆಲವೇ ಕೆಲವು ಸದಸ್ಯೆಯರು, ಉತ್ಪನ್ನ ಮಾರುವವರಿಂದ ಕೂಡಿತ್ತು. ಒಂದೇ ವರ್ಷದಲ್ಲಿ ಇಲ್ಲಿನ ಸದಸ್ಯೆಯರ ಸಂಖ್ಯೆ 41 ಸಾವಿರಕ್ಕೇರಿದೆ. ಮಾರಾಟ ಮಾಡುವ ಮಹಿಳೆಯರ ಸಂಖ್ಯೆ 150ಕ್ಕೇರಿದೆ. ಮಹಿಳೆಯರು, ಮಹಿಳೆಯರಿಗಾಗಿ, ಮಹಿಳೆಯರಿಗೋಸ್ಕರವೇ ರೂಪುಗೊಂಡ ಈ ವೇದಿಕೆ ಯಶಸ್ಸಿನ ಹಾದಿಯಲ್ಲಿ ಮುನ್ನಡೆದಿದೆ.

## ಮಹಿಳಾ ಮಾರುಕಟ್ಟೆ ಆರಂಭ ಹೇಗೆ?

ಈ ಆನ್‌ಲೈನ್ ವೇದಿಕೆಯ ರೂವಾರಿ ಅಪರ್ಣಾ ರಾವ್ ಅವರ ಮಾತುಗಳಲ್ಲೇ ಇದರ ಯಶೋಗಾಥೆಯನ್ನು, ಸಾಧನೆಯ ಹಾದಿಯನ್ನು ಕೇಳಿ.

ಆನ್‌ಲೈನ್‌ನಲ್ಲಿ ಮಹಿಳಾ ಮಾರುಕಟ್ಟೆ ಮಾಡಬೇಕು ಎಂಬ ಯೋಚನೆ ನನ್ನದೇ. ನಾನು ಮುಂಬಯಿಯಲ್ಲಿರುವಾಗ ಹ್ಯಾಂಡ್‌ಮೇಡ್ ಸೋಪ್, ಶಾಂಪು, ಜೆಲ್ ಎಲ್ಲ ಮಾಡ್ತಾ ಇದ್ದೆ. ಅಲ್ಲಿ 'ಸೋಪರ್ಸ್ ಕಮ್ಯುನಿಟಿ' ಎಂಬ ಗ್ರೂಪ್ ಇತ್ತು. ಇದನ್ನು ಮಾರಾಟ ಮಾಡಲು ಆನ್‌ಲೈನ್ ಗ್ರೂಪ್ ಬಳಸಿಕೊಂಡೆವು. ಇದು ರಾಷ್ಟ್ರಮಟ್ಟದ್ದು. ಎಲ್ಲ ರಾಜ್ಯಗಳ ಮಹಿಳೆಯರು ಮನೆಯಲ್ಲಿ ಸೋಪ್ ತಯಾರಿಸುವವರು ಗ್ರೂಪ್‌ನಲ್ಲಿ ಸೇರಿಕೊಂಡು ವಹಿವಾಟು ನಡೆಸುತ್ತಿದ್ದೆವು. ಹಲವಾರು ಕಡೆ ವರ್ಕ್‌ಶಾಪ್, ಮೇಳ ನಡೆಸಿ ಅಲ್ಲೂ ವ್ಯಾಪಾರ ಮಾಡ್ತಿದ್ದೆವು. ಅಲ್ಲದೆ ಅಲ್ಲಿ 'ಮುಂಬಯಿ ವುಮನ್ ಗ್ರೂಪ್' ಅಂತ ಒಂದು ವೇದಿಕೆ ಇತ್ತು. ಇಲ್ಲೂ ಬಟ್ಟೆ ರಿಸೇಲ್ ಎಲ್ಲ ನಡೀತಿತ್ತು. ಇದೇ ರೀತಿ ಬೆಂಗಳೂರಿನಲ್ಲಿ 'ಬೆಂಗಳೂರು ವುಮೆನ್ಸ್ ಗ್ರೂಪ್' ಅಂತ ಒಂದು ಗ್ರೂಪ್ ಇದ್ದು, ಇಲ್ಲೂ ಬಟ್ಟೆ, ಕರಕುಶಲ ವಸ್ತುಗಳ ವಹಿವಾಟು ನಡೀತಿತ್ತು.

ಎಂಟು ವರ್ಷಗಳ ಹಿಂದೆ ಫೇಸ್‌ಬುಕ್‌ಲ್ಲಿ ಖಾತೆ ತೆರೆದಾಗ ಮುಂಬಯಿಯಲ್ಲಿ ನಾವು ಜೊತೆಯಲ್ಲೇ ಇದ್ದ ಜಯಲಕ್ಷ್ಮಿ ಪಾಟೀಲ ಎಂಬ ಗೆಳತಿ ಸೇರಿಕೊಂಡು ಬೆಂಗಳೂರಿನಲ್ಲಿ 'ಅಂತಃಪುರ' ಎಂಬ ಗ್ರೂಪ್ ಮಾಡಿದ್ವಿ. ಇದರಲ್ಲಿ ಎಲ್ಲ ಕ್ಯಾಟಗರಿ ಮಹಿಳೆಯರೂ ಇದ್ರು. ಜಯಲಕ್ಷ್ಮಿ ಪಾಟೀಲ ಮುಖ್ಯವಾಗಿ ನಿರ್ವಹಿಸುತ್ತಿದ್ದ ಈ ಗ್ರೂಪ್‌ನಲ್ಲಿ ನಾನೂ ಸಕ್ರಿಯಳಾದೆ. ನಾವೆಲ್ಲ ಸೇರಿ ಮಹಿಳೆಯರು ತಯಾರಿಸಿದ ಉತ್ಪನ್ನ ಮಾರಾಟ ಮಾಡಲು ಏನಾದರೂ ಮಾಡೋಣ ಎಂದು ನಿರ್ಧಾರ ಮಾಡಿದ್ವಿ. ಆದರೆ ಬ್ಯುಸಿನೆಸ್ ಮೈಂಡ್ ಅನ್ನೋದು ಯಾರಿಗೂ ಬರಲಿಲ್ಲ. ಲಾಭ ಮಾಡುವ ಉದ್ದೇಶವೇ ನಮ್ಮದಲ್ಲ.